ಅ) ರಾಜಧಾನಿಯಿಂದ ಒಟ್ಟು ಎಷ್ಟು ತಾಲ್ಲೂಕುಗಳಿಗೆ ನೇರವಾಗಿ ಸಂವಿಹಾರಿ ಬಸ್ ಸಂಪರ್ಕವಿದೆ ?

ಇ) ಹೆಚ್ಚಾಗಿ ರಾತ್ರಿ ವೇಳೆಯಲ್ಲಿ ಓಡುವ ಸುವಿಹಾರಿ ಬಸ್‌ಗಳಲ್ಲಿ ಪ್ರಯಾಣಿಕರಿಗಾಗಿ ವಿಶೇಷ ಸೌಕರ್ಯಗಳನ್ನೇನಾದರೂ ಒದಗಿಸುವ ಆಲೋಚನೆಯಿದೆಯೇ ?

ಶ್ರೀ ಪಿ. ಜಿ. ಆರ್, ಸಿಂದ್ಯ(ಸಾರಿಗೆ ಸಚಿವರು).—

ಅ) ಪ್ರಸ್ತುತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಾಜ್ಯದ ಮತ್ತು ಅಂತರ ರಾಜ್ಯದ ಮಾರ್ಗಗಳಲ್ಲಿ ಒಟ್ಟು ೯೬ ಸುವಿಹಾರಿ ಬಸ್ಸುಗಳನ್ನು ಓಡಿಸುತ್ತಿದೆ.

ಆ) ರಾಜ್ಯದ ಒಟ್ಟು ೭೪ ತಾಲ್ಲೂಕುಗಳಿಗೆ ಸಂವಿಹಾರಿ ಬಸ್ ಸೇವೆಯನ್ನು ವಿಸ್ತರಿಸಲಾಗಿದೆ.

ಇ) ಇಲ್ಲ

ಸಾವಳಗಿಯಲ್ಲಿ ಬಸ್ ನಿಲ್ದಾಣ ಕಟ್ಟಡ ನಿರ್ಮಾಣ.

೪೯. ಶ್ರೀ ಬಾಬುರೆಡ್ಡಿ ತುಂಗಳ(ಬೀಳಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಮಖಂಡಿ ತಾಲ್ಲೂಕಿನ ಸಾವಳಗಿ ಮಾರ್ಗವಾಗಿ ಪ್ರತಿದಿನ ಓಡಾಡುವ ಸರ್ಕಾರಿ ಬಸ್ಸುಗಳ ಸಂಖ್ಯೆ ಎಷ್ಟು ?

ಆ) ಅಲ್ಲಿ ಸುಸಜ್ಜಿತ ಬಸ್ ನಿಲ್ದಾಣವೊಂದನ್ನು ನಿರ್ಮಿಸಲು ರಾಜ್ಯ ರಸ್ತೆ ಸಾರಿಗೆ ನಿಗಮ ಆಲೋಚಿಸಿದೆಯೇ ?

ಇ) ಹಾಗಿದ್ದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಖರ್ಚು ಮಾಡಬೇಕಾಗಿರುವ ಅಂದಾಜು ವೆಚ್ಚ ವೆಷ್ಟು ಹಾಗೂ ಕಟ್ಟಡ ನಿರ್ಮಾಣ ಕೆಲಸವನ್ನು ಯಾವಾಗ ಆರಂಭ ಮಾಡಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂದ್ಯ(ಸಾರಿಗೆ ಸಚಿವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಒಟ್ಟು ೨೬ ಬಸ್ಸುಗಳು ಪ್ರತಿದಿನ ಸಾವಳಗಿ ಮಾರ್ಗವಾಗಿ ಓಡಾಡುತ್ತಿವೆ.

ಆ) ೧೯೮೮-೮೯ನೇ ಸಾಲಿನ ಆಯಂವ್ಯಯದಲ್ಲಿ ಸೇರಿಸಲಂ ಪರಿಗಣಿಸಲಾಗುವುದಂ.

ಇ) ಅಂದಾಜಂ ವೆಚ್ಚ ೧.೫೦ ಲಕ್ಷ ರೂ. ಗಳು. ೧೯೮೮-೮೯ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲ್ಪಟ್ಟಲ್ಲಿ, ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಲಾಗುವುದು.

ಬಿಜಾಪುರ ಜಿಲ್ಲೆಯ ಬೀಳಗಿಯಲ್ಲಿ ಮುನ್ಸೀಫ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಸ್ಥಾಪನೆ

೪೪. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಜಾಪುರ ಜಿಲ್ಲೆಯ ಬೀಳಗಿಯಲ್ಲಿ ಮುನ್ಸೀಫ್ ನ್ಯಾಯಾಲಯವೊಂದನ್ನು ಸ್ಥಾಪಿಸುವ ವಿಚಾರ ಸರಕಾರದಪರ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ಅಲ್ಲಿ ನ್ಯಾಯಾಲಯ ಸ್ಥಾಪನೆಯು ಕುರಿತು ರಾಜ್ಯದ ಉಚ್ಚ ನಾ ಯಾಲಯದಿಂದ ವರದಿ ಏನಾದರೂ ಬಂದಿದೆಯೇ ?

ಇ) ಬಂದಿದ್ದಲ್ಲಿ ಅಲ್ಲೇ ತ್ವರಿತವಾಗಿ ನ್ಯಾಯಾಲಯ ಆರಂಭಿಸಲು ಯಾವ ಕ್ರಮ ಕೈಕೊಳ್ಳ ಲಾಗುವುದು ?